ಓ.ಎಸ್. ನಂ. 179/2012

ಪಿ.ಡಬ್ಲ್ಯು: 02

ದಿನಾಂಕ: 17-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: 01 ನೇ ಪ್ರತಿವಾದಿ ಪರ – ಶ್ರೀ ಹೆಚ್.ಜಿ.ಆರ್. ವಕೀಲರಿಂದ.

ನನ್ನ ತಂದೆಯ ತಂದೆ ಹೆಸರು ಗೆದ್ದಲಗಟ್ಟೆ ಮಾರಯ್ಯ ಎಂದರೆ ಸರಿ. ಸದರಿರವರಿಗೆ ಪಾಲಯ್ಯ, ಓಬಯ್ಯ ಮತ್ತು ಬೋರಯ್ಯ ಎಂಬ ಮೂರು ಜನ ಮಕ್ಕಳು. ಸದರಿ ಪಾಲಯ್ಯ ಇವರ ಹೆಂಡತಿ ಹೆಸರು ಪಾಲಮ್ಮ. ಸದರಿ ಪಾಲಯ್ಯ ಮತ್ತು ಪಾಲಮ್ಮ ಇವರಿಗೆ ಶಾಂತಮ್ಮ ಎಂಬ ಒಬ್ಬಳೇ ಮಗಳು. ಸದರಿ ಶಾಂತಮ್ಮ ಇವರಿಗೆ ನಿಂಗಮ್ಮ ಎಂಬ ಒಬ್ಬಳೇ ಮಗಳು.

ನನ್ನ ತಂದೆಯ ಹೆಸರು ಓಬಯ್ಯ. ವಾದಿ ಓಬಯ್ಯ ಮತ್ತು 01 ನೇ ಪ್ರತಿವಾದಿ ಪಾಲಯ್ಯ ಇವರಿಬ್ಬರು ಬೋರಯ್ಯನ ಮಕ್ಕಳು ಎಂದರೆ ಸರಿ. ಮಾರಯ್ಯನ ಮಗ ಓಬಯ್ಯ ಇವರಿಗೆ ಪಾಲಯ್ಯ ಮತ್ತು ಓಬಯ್ಯ ಎಂಬ ಇಬ್ಬರು ಮಕ್ಕಳು. ಸದರಿ ಪಾಲಯ್ಯ ತಂದೆ: ಓಬಯ್ಯ ಇವರಿಗೆ ಕೃಷ್ಣಪ್ಪ ಎಂಬ ಒಬ್ಬನೇ ಮಗ. ಸದರಿ ಕೃಷ್ಣಪ್ಪ ಇವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಕೃಷ್ಣಪ್ಪ ಇವರು ನಿಧನ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕೃಷ್ಣಪ್ಪ ಇವರ ಮಕ್ಕಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಕೃಷ್ಣಪ್ಪನ ಹೆಂಡತಿ ಈಗ ಜೀವಂತ ಇದ್ದಾರೆ ಎಂದರೆ ಸರಿ. ಸದರಿರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಓಬಯ್ಯ ತಂದೆ: ಓಬಯ್ಯ ಇವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ., ಅವರುಗಳೆಂದರೆ ಓಬಯ್ಯ, ರಾಜಪ್ಪ, ಬೋರಯ್ಯ ಮತ್ತು ಸೋಮಶೇಖರ. ಸದರಿ ನಾಲ್ಕು ಜನ ಮಕ್ಕಳಲ್ಲಿ ಬೋರಯ್ಯ ಮತ್ತು ಸೋಮಶೇಖರ ಇವರು ಜೀವಂತ ಇದ್ದಾರೆ. ಸದರಿ ಸೋಮಶೇಖರ್ ಇವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಬೋರಯ್ಯ ತಂದೆ: ಓಬಯ್ಯ ಇವರನ್ನು ಸಹ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಓಬಯ್ಯ ತಂದೆ: ಓಬಯ್ಯ ಮತ್ತು ರಾಜಪ್ಪ ತಂದೆ: ಓಬಯ್ಯ ಇವರುಗಳು ಈಗ ನಿಧನ ಹೊಂದಿದ್ದು, ಸದರಿರವರ ಮಕ್ಕಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ತಂದೆಯಾದ ಓಬಯ್ಯ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ, ನನ್ನ ತಂದೆ ಓಬಯ್ಯ ಇವರಿಗೆ ಬೋರಮ್ಮ ಮತ್ತು ನನ್ನ ತಾಯಿ ಓಬಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಸದರಿ ಬೋರಮ್ಮ ಇವರಿಗೆ ಓಬಕ್ಕ ಎಂಬ ಮಗಳಿದ್ದಾಳೆ ಎಂದರೆ ಸರಿಯಲ್ಲ, ಸದರಿ ಓಬಕ್ಕ ಇವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ದಾವಾ ಆಸ್ತಿ ಐಟಂ ನಂ. 01 ಆಸ್ತಿಯ ಒಟ್ಟು ವಿಸ್ತೀರ್ಣಃ 26 ಎಕರೆ ಇದ್ದು, ಸದರಿ 26 ಎಕರೆಯಲ್ಲಿ ಕೇವಲ 17 ಎಕರೆ ಜಮೀನಿನಲ್ಲಿ ಮಾತ್ರ ಪಾಲು ಕೇಳಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಇನ್ನುಳಿದ ಜಮೀನನ್ನು ಪಾಲಯ್ಯನ ಮಗ ಕೃಷ್ಣಪ್ಪ ಇವರು ತಿಪ್ಪೇಸ್ವಾಮಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ತಿಪ್ಪೇಸ್ವಾಮಿ ಇವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಡೋರ್ ಸಂಖ್ಯೆಃ 214 ಉಳ್ಳ ಮನೆಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಮನೆ ಐಟಂ ನಂ. 02 ದಾವಾ ಆಸ್ತಿಯಲ್ಲಿಯೇ ಇದೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಪಾಟೀಸವಾಲನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.